## ನಿಮ್ಮೊಡನೆ

# ಪುಸ್ತಕೋದ್ಯಮದ ದಂಧೆ!

ಪ್ರೌಢಶಾಲೆಯ ಹಂತದಲ್ಲಿ ಮಕ್ಕಳು ಗ್ರಂಥಾಲಯದತ್ತ ಆಕರ್ಷಿತರಾಗಬೇಕಾದರೆ, ಸರಳ ಭಾಷೆಯ, ವಾಚನಾಭಿರುಚಿ ಬೆಳೆಸುವ ಹಾಗೂ ವೈಜ್ಞಾನಿಕ ಕುತೂಹಲಗಳನ್ನು ಕೆರಳಿಸಬಲ್ಲ ಪುಸ್ತಕಗಳು ಆಯ್ಕೆ ಆಗಬೇಕಾದುದು ಸಹಜ. ಅದನ್ನು ಬಿಟ್ಟು ಓದುವ ಮಕ್ಕಳಲ್ಲಿ ಲೈಬ್ರರಿ ಎಂದರೆ 'ಗೊಡ್ಡು ವಿಚಾರಗಳ, ಕಬ್ಬಿಣದ ಕಡಲೆಗಳ ಕಂತೆ' ಎಂಬ ಭಾವನೆ ಮೂಡಿಸುವಂತಾಗಬಾರದು.

ಜನರಲ್ಲಿ ಪುಸ್ತಕ ಪ್ರೀತಿ ಹೆಚ್ಚಿದರೆ ಆ ಸಮಾಜ ಸುಸಂಸ್ಕೃತವಾಗುತ್ತದೆ ಎನ್ನುವುದು ಸಜ್ಜನರ ಅಭಿಪ್ರಾಯ. ಆದರೆ ಆ ಪುಸ್ತಕಗಳು ಸಮಾಜದಲ್ಲಿ ಎಂತಹ ಮೌಲ್ಯಗಳನ್ನು ಬಿತ್ತುತ್ತಿವೆ ಎನ್ನುವುದೂ ಮುಖ್ಯ. ಪುಸ್ತಕಗಳ ಮೂಲಕವೂ ಅಸಮಾನತೆಯನ್ನು ಬಿತ್ತುವ, ಲಿಂಗ ತಾರತಮ್ಯ ಉಂಟು ಮಾಡುವ ಬರಹಗಾರರಿದ್ದಾರೆ. ಇಂತಹ ಪುಸ್ತಕಗಳನ್ನು ಜನರಿಗೆ ತಲುಪಿಸುವ ಬದಲು, ಜನರಲ್ಲಿ ಸಮಾನತೆ, ಸೋದರತೆಯ ಭಾವನೆಯನ್ನು ಬಲಪಡಿಸುವ, ಜೀವನಪ್ರೀತಿ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತುವ ಪುಸ್ತಕಗಳನ್ನು ಹೆಚ್ಚು ಪ್ರಚಾರ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಮಹತ್ವದ ಪಾತ್ರ ವಹಿಸುತ್ತವೆ. ರಾಜ್ಯದಲ್ಲಿರುವ 400ಕ್ಕೂ ಹೆಚ್ಚು ಗ್ರಂಥಾಲಯಗಳಲ್ಲಿ ಇಂತಹ ಪುಸ್ತಕಗಳು ಜನರಿಗೆ ಲಭ್ಯವಾಗುವಂತೆ ಮಾಡುವುದು ಸರಕಾರದ ಕರ್ತವ್ಯ. ಅದಕ್ಕೆಂದೇ ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡಲು ಪ್ರತ್ಯೇಕ ಸಮಿತಿಯನ್ನು ಸರಕಾರ ರಚಿಸುತ್ತದೆ. ಈ ಸಮಿತಿ ಎಂತಹ ಪುಸ್ತಕಗಳನ್ನು ಆಯ್ಕೆ ಮಾಡಬೇಕು ಎಂಬ ಬಗ್ಗೆ ಮಾರ್ಗಸೂಚಿಯನ್ನೂ ರೂಪಿಸಲಾಗಿದೆ. ಆದರೆ ರಾಜ್ಯದಲ್ಲಿ ಗ್ರಂಥಾಲಯಗಳಿಗೆ ಆಯ್ಕೆಯಾಗುತ್ತಿರುವ ಪುಸ್ತಕಗಳ ಪಟ್ಟಿಯನ್ನು ನೋಡಿದರೆ ಪ್ರತಿವರ್ಷವೂ ದುರಾಡಳಿತದ, ಭ್ರಷ್ಟಾಚಾರದ ದೂರುಗಳು ಎದ್ದು ಕಾಣುತ್ತವೆ. ಒಬ್ಬರೇ ಪ್ರಕಾಶಕರ ವಿವಿಧ ಹೆಸರಿನ ಪ್ರಕಾಶನ ಸಂಸ್ಥೆಯ ಅತ್ಯಧಿಕ ಪುಸ್ತಕಗಳನ್ನು ಖರೀದಿಸುವುದು, ಅಭಿರುಚಿಹೀನ ಹಾಗೂ ಜನರಲ್ಲಿ ತಾರತಮ್ಯ ಉಂಟು ಮಾಡುವ ವಿಚಾರಧಾರೆಗಳ ಪುಸ್ತಕಗಳನ್ನು ಖರೀದಿಸುವುದು, ವಸೂಲಿಬಾಜಿಗೆ ಮಣಿಯುವುದು, ಕಮೀಶನ್ ಪಡೆದು ಪುಸ್ತಕಗಳ ಆಯ್ಕೆ ಮಾಡುವುದು– ಹೀಗೆ ಪ್ರತಿ ವರ್ಷವೂ ಪುಸ್ತಕ ಖರೀದಿಯಲ್ಲಿ ನಡೆಯುವ ಅನ್ಯಾಯಗಳು ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇವೆ.

2013–14ನೇ ಸಾಲಿನಲ್ಲಿ ರಾಜ್ಯದ ಪ್ರೌಢಶಾಲೆಗಳ ಗ್ರಂಥಾಲಯಗಳಿಗೆ ಆಯ್ಕೆ ಮಾಡಿರುವ 849 ಪುಸ್ತಕಗಳಲ್ಲಿ ನೂರಕ್ಕೂ ಹೆಚ್ಚು ಪುಸ್ತಕಗಳು ಬೆಳೆಯುವ ಮಕ್ಕಳಲ್ಲಿ ವಾಚನಾಭಿರುಚಿ ಉಂಟು ಮಾಡುವುದಕ್ಕೆ ಪೂರಕವಾಗಿಲ್ಲ ಎನ್ನುವುದು ಈ ಸಲ ಮತ್ತೆ ಸುದ್ದಿಯಾಗಿದೆ. ಅದರಲ್ಲೂ ಪ್ರೌಢಶಾಲೆಯ ಮಕ್ಕಳಲ್ಲಿ ತಾರತಮ್ಯ ಭಾವನೆಯನ್ನು ಬಿತ್ತಬಲ್ಲ ಮನುವಿನ ವಿಚಾರಧಾರೆ, ಮನುಸ್ಮೃತಿಯಂತಹ ಕೃತಿಗಳನ್ನು ಪ್ರೌಢಶಾಲೆ ಗ್ರಂಥಾಲಯಗಳಿಗೆ ಆಯ್ಕೆ ಮಾಡಿರುವುದು ನಿಜಕ್ಕೂ ಆತಂಕಕಾರಿ. 'ವೈದಿಕ ಧರ್ಮದಲ್ಲಿ ಆತ್ಮ– ಬ್ರಹ್ಮ' ಮುಂತಾದ ಪುಸ್ತಕಗಳನ್ನು ಆಯ್ಕೆ ಮಾಡುವ ಮೂಲಕ ಆ ಎಳೆಯ ಮಕ್ಕಳ ಗಂಟಲಿಗೆ ಕಡುಬು ತುರುಕಿದಂತಾಗಿದೆ. ಪ್ರೌಢಶಾಲೆಯ ಹಂತದಲ್ಲಿ ಮಕ್ಕಳು ಗ್ರಂಥಾಲಯದತ್ತ ಆಕರ್ಷಿತರಾಗಬೇಕಾದರೆ, ಸರಳ ಭಾಷೆಯ, ವಾಚನಾಭಿರುಚಿ ಬೆಳೆಸುವ ಹಾಗೂ ವೈಜ್ಞಾನಿಕ ಕುತೂಹಲಗಳನ್ನು ಕೆರಳಿಸಬಲ್ಲ ಪುಸ್ತಕಗಳು ಆಯ್ಕೆ ಆಗಬೇಕಾದುದು ಸಹಜ. ಅದನ್ನು ಬಿಟ್ಟು ಓದುವ ಮಕ್ಕಳಲ್ಲಿ ಲೈಬ್ರರಿ ಎಂದರೆ 'ಗೊಡ್ಡು ವಿಚಾರಗಳ, ಕಬ್ಬಿಣದ ಕಡಲೆಯ ಕಂತೆ' ಎಂಬ ಭಾವನೆ ಮೂಡಿಸುವಂತಾಗಬಾರದು.

ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸಲು, ಸಾರ್ವಜನಿಕರು ಪಾವತಿಸುವ ಆಸ್ತಿ ತೆರಿಗೆ ಹಣದಲ್ಲೇ ಶೇಕಡಾ 10ರಷ್ಟನ್ನು ಸರಕಾರ ಮೀಸಲಿಟ್ಟಿದೆ. ಸಾರ್ವಜನಿಕರ ಹಣವನ್ನು ಬಳಸುವಾಗ ಗ್ರಂಥಾಲಯದ ಪುಸ್ತಕ ಆಯ್ಕೆ ಸಮಿತಿಯೂ ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಕಳೆದ ವರ್ಷ ಕೇವಲ 15 ದಿನಗಳಲ್ಲಿ ನೂರಾರು ಪುಸ್ತಕಗಳನ್ನು ಆಯ್ಕೆ ಮಾಡುವ ಮೂಲಕ ಸುದ್ದಿ ಮಾಡಿದ್ದ ಆಯ್ಕೆ ಸಮಿತಿಯು, ಈ ವರ್ಷ ಪ್ರತಿಗಾಮಿ ವಿಚಾರಗಳನ್ನು ಮಕ್ಕಳಲ್ಲಿ ಬಿತ್ತುವ ಪುಸ್ತಕಗಳನ್ನು ದೊಡ್ಡ ಮಟ್ಟದಲ್ಲಿ ಖರೀದಿಸಿ ಮತ್ತೆ ತಪ್ಪು ಮಾಡಿದೆ. ಕೆಲವೇ ಕೆಲವು ಪ್ರಕಾಶಕರಿಗೆ ಕಳ್ಳಮಾರ್ಗದಲ್ಲಿ ನೆರವಾಗುವುದನ್ನು ಬಿಟ್ಟು, ಸಣ್ಣ ಪ್ರಕಾಶಕರಿಗೆ ಮತ್ತು ಲೇಖಕ– ಪ್ರಕಾಶಕರಿಗೆ ಹೆಚ್ಚಿನ ಮಹತ್ವ ನೀಡುವಂತೆ ಖರೀದಿ ಯೋಜನೆಯನ್ನು ಮರುರೂಪಿಸಬೇಕಿದೆ.

ಪುಸ್ತಕೋದ್ಯಮ ಕನ್ನಡದಲ್ಲಿ ಬೃಹದಾಕಾರವಾಗಿ ಬೆಳೆದಿದೆ. ಆದರೆ ನೂರಾರು ಪ್ರಕಾಶನ ಸಂಸ್ಥೆಗಳು ಕೇವಲ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಮಾರಾಟ ಮಾಡಿ ಹಣ ಗಳಿಸಲೆಂದೇ ಹುಟ್ಟಿಕೊಂಡಿವೆ. ಕೆಲವರಿಗೆ ಇದೊಂದು ದೊಡ್ಡ ದಂಧೆಯೇ ಆಗಿದ್ದು, ಅಧಿಕಾರಿಗಳ ಮಟ್ಟದ ಭ್ರಷ್ಟತೆಯೂ ಇದಕ್ಕೆ ನೆರವಾಗುತ್ತಿದೆ. ಸರಕಾರ ಇತ್ತ ಗಮನ ಹರಿಸಿ ಭ್ರಷ್ಟತೆ ಮತ್ತು ಅದಕ್ಷತೆಯನ್ನು ನಿಯಂತ್ರಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ. ಗ್ರಂಥಾಲಯಕ್ಕೆ ಪುಸ್ತಕ ಖರೀದಿ ಮಾಡುವಾಗ ಪಾರದರ್ಶಕವಾಗಿ, ಯಾವುದೇ ಭ್ರಷ್ಟಾಚಾರವಿಲ್ಲದೆ, ಅತ್ಯುತ್ತಮ ಪುಸ್ತಕಗಳು ಆಯ್ಕೆ ಆಗುವಂತೆ ಮಾಡಲು ಹೊಸ ವಿಧಾನಗಳನ್ನು ರೂಪಿಸಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ತಜ್ಞರ ಅನುಭವ ಮತ್ತು ಸಾಂಸ್ಥಿಕ ಚೌಕಟ್ಟನ್ನೂ ಬಳಸಿಕೊಳ್ಳುವುದು ಒಳ್ಳೆಯದು.

■ ಬಿ.ಎಂ.ಹನೀಫ್



ಈಶ್ವರ್